ಮಾಸ್ತರ' ಕತೆಗಳಲ್ಲಿನ ಪಾತ್ರಗಳು ಸಾವಿನ ಬಗ್ಗೆ ಪ್ರತಿಕ್ರಿಯಿಸುವ ರೀತಿ ಕೆಲವೊಮ್ಮೆ ಆಘಾತಕ್ಕೆ ಮತ್ತೊಮ್ಮೆ ಅಚ್ಚರಿಗೆ ದೂಡುತ್ತದೆ. 'ಸರ್ಪದೋಷ' ಕತೆಯಲ್ಲಿ ಶೇಷಭಟ್ಟ ಅರ್ಧಾಂಗವಾಯುವಿನಿಂದ ಬಳಲುತ್ತಿದ್ದ ತನ್ನ ತಂದೆಯನ್ನು ಒಂಟಿಯಾಗಿ ಮನೆಯಲ್ಲಿ ಸಾಯಲುಬಿಟ್ಟು ತನ್ನ ಹೆಂಡತಿಯೊಂದಿಗೆ ಅವಳ ತವರುಮನೆಗೆ ಹೋಗುವುದನ್ನು ನಿರ್ಭಾವುಕರಾಗಿ ಚಿತ್ರಿಸುತ್ತಾರೆ. ಅದೇ ರೀತಿ 'ತುಕ್ಕಪ್ಪಾ ಮಾಸ್ತರ' ಕತೆಯಲ್ಲಿ ತುಕ್ಕಪ್ಪಾ ಮಾಸ್ತರ ಸತ್ತಿದ್ದಾರೆ ಎಂದು ಭಾವಿಸಿದ ನಿರೂಪಕ ಅವರ ಅಂತ್ಯಸಂಸ್ಕಾರಕ್ಕೆ ಸಿದ್ಧನಾಗಿ ಹೋಗುವುದನ್ನು ಅಷ್ಟೇ ಸಹಜವಾಗಿ ವಿವರಿಸುತ್ತಾರೆ. ಇವೆಲ್ಲವೂ ಮನುಷ್ಯ ವರ್ತನೆಗಳ ಬಗ್ಗೆ ಅವರಿಗಿದ್ದ ಸೂಕ್ಷ್ಮ ಗ್ರಹಿಕೆಯನ್ನೇ ತೋರಿಸುತ್ತವೆ. 'ಯಾತನಾ ಶಿಬಿರ' ಕಾದಂಬರಿ 1972ರ ಆಸುಪಾಸಿನಲ್ಲಿ ಉತ್ತರ ಕರ್ನಾಟಕದಲ್ಲಿ ತಲೆದೋರಿ ಅಪಾರ ನೋವು ದುಃಖ ಸಾವುಗಳಿಗೆ ಕಾರಣವಾದ ಕ್ಷಾಮದ ವಸ್ತುವನ್ನು ನಿರ್ವಹಿಸಿದೆ. ಸಾವನ್ನು ಗೆದ್ದು ಬದುಕಬೇಕೆಂಬ ಅದಮ್ಯ ಆಕಾಂಕ್ಷೆಯಿಂದ ನಡೆಸಿದ ಮನುಷ್ಯನ ಪ್ರಯತ್ನವನ್ನು ಚಿತ್ರಿಸುತ್ತದೆ. ಹೀಗೆ ನೋವು ಸಾವುಗಳ ಜೊತೆಗೆ ಕಾವ್ಯಗಳಲ್ಲಿ ಹಾಯ್ಕುಗಳಲ್ಲಿ ನಿಸರ್ಗ ಸೌಂದರ್ಯವನ್ನೂ ಕೂಡ ಅವರು ಸಮರ್ಥವಾಗಿ ಚಿತ್ರಿಸಿದ್ದಾರೆ.

ಕುಸನೂರರ ಉತ್ಕೃಷ್ಟ ಕೃತಿಗಳು ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನವಾಗಿವೆ. ಐದು ವಿವಿಧ ಪ್ರಕಾರಗಳಿಗಾಗಿ ಐದು ರಾಜ್ಯ ಅಕಾಡೆಮಿ ಪ್ರಶಸ್ತಿ ಪಡೆದ ಹೆಗ್ಗಳಿಕೆ ಅವರದ್ದು. 2014ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಅವರಿಗೆ ಸಂದಿದೆ. ಕುಸನೂರರು ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರೂ ಆಗಿದ್ದರು.

ಸಾಹಿತ್ಯದ ಜೊತೆಜೊತೆಗೆ ಅವರ ಅಭಿವ್ಯಕ್ತಿ ಪ್ರಕಟಗೊಂಡಿದ್ದು ಚಿತ್ರಕಲೆಯಲ್ಲಿ. ಅವರಿಗೆ ಪ್ರಿಯವಾದದ್ದು ಅಮೂರ್ತಕಲೆ. ಚಿತ್ರಕಲೆಯಲ್ಲೂ ಅಪಾರ ಪ್ರಯೋಗ ಮತ್ತು ಕೃಷಿಯನ್ನು ಕುಸನೂರರು ಮಾಡಿದ್ದಾರೆ. ನಿವೃತ್ತಿಯ ನಂತರ ಅವರು ಚಿತ್ರಕಲೆಯಲ್ಲಿ ತಮ್ಮನ್ನು ಹೆಚ್ಚು ಕಾಲ ತೊಡಗಿಸಿಕೊಂಡರು. ರೇಖಾಚಿತ್ರಗಳು, ಬಣ್ಣದ ಚಿತ್ರಗಳಲ್ಲಿ ಅವರ ಆಸಕ್ತಿ. ಅವರಿಗೆ ಕ್ಯಾನ್ವಾಸೇ ಬೇಕೆಂದಿರಲಿಲ್ಲ. ಒಂದು ಬಿಳಿಯ ಹಾಳೆ ಸಿಕ್ಕರೂ ಸಾಕಿತ್ತು. ಆಮಂತ್ರಣ ಪತ್ರಿಕೆಯ ಹಿಂಬದಿಗಳಲ್ಲೂ ಕೂಡ ಅವರ ಚಿತ್ರಗಳು ಅರಳುತ್ತಿದ್ದವು. ಅವರ ಚಿತ್ರಗಳನ್ನು ಕನ್ನಡದ ಅನೇಕ ಪುಸ್ತಕಗಳ ಮುಖಪುಟಕ್ಕೆ ಬಳಸಲಾಗಿದೆ. ಅನೇಕ ನಿಯತಕಾಲಿಕೆಗಳಿಗೂ ಅವರು ರೇಖಾಚಿತ್ರಗಳನ್ನು ರಚಿಸಿದ್ದಾರೆ. ಅವರ ಬಹುಮುಖ ಪ್ರತಿಭೆ ಅನೇಕ ಕವಲುಗಳಲ್ಲಿ ಹರಿದಿದೆ.

ಕನ್ನಡಕ್ಕೆ ಇಷ್ಟೆಲ್ಲ ಕೊಡುಗೆ ಅವರಿಂದ ಸಂದರೂ ಅವರಿಗೆ ಸಲ್ಲಬೇಕಾದ ಸ್ಥಾನಮಾನವನ್ನು ಕನ್ನಡ ಸಾರಸ್ವತ ಲೋಕ ಅವರಿಗೆ ನೀಡಲಿಲ್ಲ ಎಂಬ ದೂರು ಇದ್ದೇ ಇದೆ. ಕೊರೊನಾದಿಂದ ಆದ ಲಾಕ್‌ಡೌನಿನ ಆತಂಕದಲ್ಲಿ ಕನ್ನಡದ ಮಹತ್ವದ ಲೇಖಕರೊಬ್ಬರ ಸಾವಿನ ಸುದ್ದಿ ಕಳೆದು ಹೋಯಿತು.

### "ಪ್ರವೀಣ"

ಚಿಕ್ಕೋಡಿಯವರಾದ ಪ್ರವೀಣ್, ನ್ಯಾಯಾಲಯದಲ್ಲಿ ಕೆಲಕಾಲ ಕೆಲಸಮಾಡಿ ಬಳಿಕ ಬ್ಯಾಂಕ್ ಉದ್ಯೋಗಕ್ಕೆ ಸೇರಿದರು. ಬ್ಯಾಂಕ್ ಕೆಲಸಕ್ಕೆ ರಾಜೀನಾಮೆ ನೀಡಿ ಪ್ರಸ್ತುತ 'ಡೆಸ್ಟಿನ್' ಎಂಬ ವಿದ್ಯಾಸಂಸ್ಥೆಯನ್ನು ನಡೆಸುತ್ತಿದ್ದಾರೆ.

ಅವರ ಪ್ರಕಟಿತ ಕೃತಿಗಳು: 'ಸಂಕಲ್ಪ' (ಕಾದಂಬರಿ), 'ವ್ಯೂಹಗನ್ನಡಿ' (ಕಥಾಸಂಕಲನ), 'ಬಾನಸಮುದ್ರಕೆ ಗಾಳನೋಟ' (ಕವನ ಸಂಕಲನ), 'ಓದು, ಕಲಿಕೆ ಮತ್ತು ಜ್ಞಾಪಕ ಶಕ್ತಿಯ ತಂತ್ರಗಳು'.